RNU AIR DHARWAD

NOVEMBER 28, 2024

AKASHAVANI - DHARWAD

PRADESH SAMACHARA (KANNADA) 07.05 A.M.

<><><>

ಆಕಾಶವಾಣಿ

ಪ್ರದೇಶ ಸಮಾಚಾರ

ಓದಿದವರು: ಹರ್ಷವರ್ಧನ ಶೀಲವಂತ

<><><>

ಮುಖ್ಯಾಂಶಗಳು:

<><><>

- ಸರ್ವಧರ್ಮ ಸಮನ್ವಯ, ಭಾರತದ ಮಣ್ಣಿನ ಗುಣ – ಮುಖ್ಯಮಂತ್ರಿ ಸಿದ್ದರಾಮಯ್ಯ.
- ಶರಣ ಸಿದ್ಧಾಂತ ಎಲ್ಲರೂ ಮೆಚ್ಚಿರುವ, ನೆಚ್ಚಿರುವ ಸಿದ್ಧಾಂತ – ನಾಡೋಜ ಗೊ.ರು. ಚನ್ನಬಸಪ್ಪ.
- ಕಳಸಾ–ಬಂಡೂರಾ ಅನುಷ್ಟಾನಕ್ಕೆ, ಕೇಂದ್ರ ಸಚಿವರ ಮಧ್ಯಸ್ಥಿಕೆ ಅನಿವಾರ್ಯ – ಡಿ.ಕೆ.ಶಿವಕುಮಾರ.
- ದೇಸಿ ಬಾಳೆಯ ವೈವಿಧ್ಯ, ಕೃಷಿ ಮತ್ತು ಆಹಾರ ಸಂಸ್ಕೃತಿ ಪರಿಚಯಿಸಲು, ಧಾರವಾಡದಲ್ಲಿ, ಇಂದಿನಿಂದ ಮೂರು ದಿನಗಳ, 'ಬಾಳೆ ಮೇಳ'.

<><><>

ಈಗ ವಾರ್ತೆಗಳ ವಿವರ

<><><>

ಭಾರತ ಬಹುತ್ವದ ದೇಶ. ಸರ್ವಧರ್ಮ ಸಮನ್ವಯ ಭಾರತದ ಮಣ್ಣಿನ ಗುಣ. ಇದನ್ನು ಕಾಪಾಡುವುದು, ಪ್ರತಿಯೊಬ್ಬ ಭಾರತೀಯನ ಕರ್ತವ್ಯ ಎಂದು, ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದ್ದಾರೆ. ಬಳ್ಳಾರಿ ಸಭಾಪ್ರಾಂತದ, ಧರ್ಮಕ್ಷೇತ್ರ ಅಮೃತ ಮಹೋತ್ಸವ ಸಮಾರಂಭವನ್ನು ಉದ್ಘಾಟಿಸಿ ಅವರು, ಮಾತನಾಡಿದರು. ಕ್ರೈಸ್ತ ಧರ್ಮ ಗುರುಗಳು, ಕ್ರೈಸ್ತ ವಿದ್ಯಾ ಸಂಸ್ಥೆಗಳು, ಎಲ್ಲ ಧರ್ಮದ, ಎಲ್ಲ ಜಾತಿಯ ಬಡವರಿಗೂ, ಶಿಕ್ಷಣ ನೀಡುತ್ತ ಬಂದಿದ್ದಾರೆ. ಇದು ಸಮಾಜಕ್ಕೆ ಬಹು ದೊಡ್ಡ ಕೊಡುಗೆ. ವೈಚಾರಿಕ ಮತ್ತು ವೈಜ್ಞಾನಿಕ ಶಿಕ್ಷಣ ದೊರೆತಾಗ ಮಾತ್ರ, ಶಿಕ್ಷಣದ ಉದ್ದೇಶ ಸಫಲವಾಗುತ್ತದೆ, ಎಂದರು.

<><><>

ಶರಣ ಸಿದ್ಧಾಂತ ಎಲ್ಲರೂ ಮೆಚ್ಚಿರುವ, ನೆಚ್ಚಿರುವ ಸಿದ್ಧಾಂತ ಎಂದು, ಮಂಡ್ಯದ 87ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ, ನಿಯೋಜಿತ ಅಧ್ಯಕ್ಷ ಹಾಗೂ ಶರಣ ಸಾಹಿತ್ಯ ಪರಿ ್ತಿನ ಸಂಸ್ಥಾಪಕ ಅಧ್ಯಕ್ಷರಾದ, ನಾಡೋಜ ಗೊ.ರು ಚನ್ನಬಸಪ್ಪ ಹೇಳಿದ್ದಾರೆ. ಧಾರವಾಡದ ರಂಗಾಯಣ ಆವರಣದ, ಸುವರ್ಣ ಸಾಂಸ್ಕೃತಿಕ ಸಮುಚ್ಚಯ ಭವನದಲ್ಲಿ, ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತಿನ, ಧಾರವಾಡ ಜಿಲ್ಲಾ ಘಟಕದ, ಪದಾಧಿಕಾರಿಗಳ ಪದ ಗ್ರಹಣ ಸಮಾರಂಭದಲ್ಲಿ, ಸನ್ಮಾನ ಸ್ವೀಕರಿಸಿ ಅವರು, ಮಾತನಾಡಿದರು.

<><><>

ನಾಡೋಜ ಗೊ.ರು.ಚ. ಧ್ವನಿ 28 ಸೆಕೆಂದುಗಳು

<><><>

ಸರ್ಕಾರಿ ಆಸ್ಪತ್ರೆಗಳ ಅಗತ್ಯತೆಗಳನ್ನು ಪೂರೈಸಲು, ಶಿವಮೊಗ್ಗ ಜಿಲ್ಲೆಯ ಸಾಗರ, ಹೊಸನಗರ ಮತ್ತು ಗ್ರಾಮಾಂತರ ತಾಲೂಕುಗಳಿಗೆ, ತಲಾ ಒಂದು ಮೊಬೈಲ್ ಮೆಡಿಕೇರ್ ಯುನಿಟ್ ಮಂಜೂರು ಮಾಡಲಾಗಿದ್ದು, ಜನವರಿಯಿಂದ ಸಾರ್ವಜನಿಕರ ಸೇವೆಗೆ ಲಭ್ಯವಾಗಲಿವೆ ಎಂದು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಖಾತೆ ಸಚಿವ ದಿನೇಶ ಗುಂಡೂರಾವ ತಿಳಿಸಿದ್ದಾರೆ. ಭದ್ರಾವತಿ ತಾಲೂಕು ಆರೋಗ್ಯ ಕೇಂದ್ರಕ್ಕೆ ಭೇಟಿ ನೀಡಿ, ಅವರು ಸುದ್ದಿಗಾರರೊಂದಿಗೆ ಮಾತನಾಡಿ, ರಾಜ್ಯದ 340 ಆರೋಗ್ಯ ಕೇಂದ್ರಗಳಿಗೆ ಹೊಸ ಆಂಬ್ಯುಲೆನ್ಸ್‌ಗಳನ್ನು ಒದಗಿಸಲಾಗಿದೆ ಎಂದರು.

<><><>

ಕ್ಯಾಸನೂರು ಮಂಗನ ಕಾಯಿಲೆ ಬಾಧಿತ, ಸಾಗರ ತಾಲೂಕಿನ ಅರಳಗೋಡು ಗ್ರಾಮಕ್ಕೆ ಖುದ್ದು ಭೇಟಿ ನೀಡಿ, ಪರಿಶೀಲಿಸಿದ್ದಾಗಿ ತಿಳಿಸಿದ ಸಚಿವರು, ಉತ್ತರಕನ್ನಡ, ಚಿಕ್ಕಮಗಳೂರು, ಉಡುಪಿ ಮತ್ತು ಶಿವಮೊಗ್ಗ ಜಿಲ್ಲೆಗಳ ಆರೋಗ್ಯಾಧಿಕಾರಿಗಳೊಂದಿಗೆ ಸಮಾಲೋಚಿಸಲಾಗಿದೆ. ಸ್ಥಳೀಯ ವೈದ್ಯಾಧಿಕಾರಿಗಳು ಕಾಯಿಲೆ ಉಲ್ಬಣಿಸುವ ಮುನ್ನ, ಅಗತ್ಯ ಕ್ರಮ ಕೈಗೊಳ್ಳುವಂತೆ ಸೂಚಿಸಲಾಗಿದೆ ಎಂದರು.

<><><>

ಸಾಗರ ತಾಲೂಕಿನ ಆಯ್ದ ಒಂದು ಪ್ರದೇಶದಲ್ಲಿ ಮಾತ್ರ ಕಂಡುಬರುವ ಹಂದಿಗೋದು ಕಾಯಿಲೆ ಬಗ್ಗೆ, ವೈಜ್ಞಾನಿಕ ಅಧ್ಯಯನ ನಡೆಸಿ, ವಿಸ್ತೃತ ವರದಿ ನೀಡುವಂತೆ, ಆರೋಗ್ಯ ಇಲಾಖೆ ಆಯುಕ್ತ ಕೆ.ಬಿ.ಶಿವಕುಮಾರ ಅವರಿಗೆ ಸೂಚಿಸಿದ್ದಾಗಿ ಹೇಳಿದರು.

<><><>

ಕಳಸಾ ಹಾಗೂ ಬಂಡೂರಾ ನಾಲೆಗಳ ಯೋಜನೆಯ ಅನುಷ್ಠಾನಕ್ಕೆ, ಕೇಂದ್ರ ಅರಣ್ಯ ಖಾತೆ ಸಚಿವ ಭೂಪೇಂದರ್ ಯಾದವ್ ಮಧ್ಯಸ್ಥಿಕೆ ವಹಿಸಿ, ಕೇಂದ್ರ ವನ್ಯಜೀವಿ ಮಂಡಳಿಯ ಅನುಮತಿ ಕೊಡಿಸುವಂತೆ, ಜಲ ಸಂಪನ್ಮೂಲ ಖಾತೆ ಸಚಿವ ಡಿ.ಕೆ.ಶಿವಕುಮಾರ, ಹೊಸ ದಿಲ್ಲಿಯಲ್ಲಿ ಸಚಿವರನ್ನು ಭೇಟಿ ಮಾಡಿ, ಮನವಿ ಸಲ್ಲಿಸಿದ್ದಾರೆ. ಕರ್ನಾಟಕ ಕಳಸಾ ನಾಲೆ ಯೋಜನೆ ಅನುಷ್ಠಾನಕ್ಕೆ ಅಗತ್ಯವಾದ ಅರಣ್ಯ ಪ್ರದೇಶದ 258 ಹೆಕ್ಟರ್‌ದಿಂದ ಕೇವಲ 26 ದಶಾಂಶ 9–2 ಹೆಕ್ಟರ್‌ಗೆ ಇಳಿಸಿದೆ. ಬಂಡೂರಿ ನಾಲಾ ಯೋಜನೆ ಅನುಷ್ಠಾನಕ್ಕೆ ಅಗತ್ಯವಿರುವ ಅರಣ್ಯ ಪ್ರದೇಶ ಭೂಮಿಯನ್ನು, 243 ಹೆಕ್ಟರ್ ನಿಂದ ಕೇವಲ 28 ದಶಾಂಶ 4–4 ಹೆಕ್ಟರ್ ವ್ಯಾಪ್ತಿಗೆ ಇಳಿಸಿ, ಪರಿಸರ ಸಂರಕ್ಷಣೆಯಲ್ಲಿ ತನ್ನ ಬದ್ಧತೆ ಪ್ರದರ್ಶಿಸಿದೆ. ರಾಜ್ಯದ ಹಿತಾಸಕ್ತಿ ಕಾಪಾಡಲು, ಕೇಂದ್ರ ಸರ್ಕಾರ ಯೋಜನೆಗೆ ಅನುಮತಿ ನೀಡಬೇಕು ಎಂದು, ಸಚಿವ ಡಿ.ಕೆ.ಶಿವಕುಮಾರ ಮನವಿ ಪತ್ರದಲ್ಲಿ ಉಲ್ಲೇಖಿಸಿದ್ದಾರೆ.

<><><>

ಸಿರಿ ಧಾನ್ಯ ಬೆಳೆಗಾರರಿಗೆ, 10 ಸಾವಿರ ರೂಪಾಯಿ ಪ್ರೋತ್ಸಾಹ ಧನ ಹಾಗೂ ಸಿರಿ ಧಾನ್ಯ ಸಂಸ್ಕರಣ ಘಟಕ ನಿರ್ಮಾಣಕ್ಕೆ, ಪ್ರಧಾನಮಂತ್ರಿ ಯೋಜನೆಯಲ್ಲಿ, 30 ಲಕ್ಷ ರೂಪಾಯಿ ವರೆಗೆ, ಸಹಾಯ ಧನ ನೀಡಲಾಗುತ್ತದೆ ಎಂದು, ಕೊಪ್ಪಳ ಜಿಲ್ಲೆ ಕೃಷಿ ಇಲಾಖೆ ಜಂಟಿ ನಿರ್ದೇಶಕ ರುದ್ರೇಶಪ್ಪ ತಿಳಿಸಿದ್ದಾರೆ. ಕೊಪ್ಪಳದಲ್ಲಿ, ಶ್ರೀ ಅಭಿನವ ಗವಿಸಿದ್ದೇಶ್ವರ ಸ್ವಾಮೀಜಿಗಳು, ಮಠದ ಆವರಣದಲ್ಲಿ ಸಿರಿ ಧಾನ್ಯ ನಡಿಗೆ ಜಾಥಾಕ್ಕೆ ಚಾಲನೆ ನೀಡಿದ, ಸಂದರ್ಭದಲ್ಲಿ ಅವರು ಮಾತನಾಡಿದರು. ಜಾಥಾದಲ್ಲಿ ಪ್ರಜಾಪಿತ ಬ್ರಹ್ಮ ಕುಮಾರಿ ಈಶ್ವರೀಯ ವಿದ್ಯಾಲಯದ ಯೋಗಿನಿ ಅಕ್ಕ ಪಾಲ್ಗೊಂಡಿದ್ದರು.

<><><>

ಪ್ರದೇಶ ಸಮಾಚಾರ ಕೇಳುತ್ತಿದ್ದೀರಿ..

<><><>

ದೇಸಿ ಬಾಳೆಯ ವೈವಿಧ್ಯ, ಕೃಷಿ ಮತ್ತು ಆಹಾರ ಸಂಸ್ಕೃತಿಯನ್ನು ಜನಪ್ರಿಯಗೊಳಿಸಲು, ಮೈಸೂರಿನ ಸಹಜ ಸಮೃದ್ಧ ಸಂಸ್ಥೆ, ಇಂದಿನಿಂದ 30ರ ವರೆಗೆ, ಧಾರವಾಡದ ಗಾಂಧಿ ಶಾಂತಿ ಪ್ರತಿ ಷ್ಠಾನ ಕೇಂದ್ರದಲ್ಲಿ, ಬೆಳಗ್ಗೆಯಿಂದ ಸಂಜೆ ವರೆಗೆ, 'ಬಾಳೆ ಮೇಳ' ಆಯೋಜಿಸಿದೆ. ಬಾಳೆಯ 50ಕ್ಕೂ ಹೆಚ್ಚಿನ ವೈವಿಧ್ಯಮಯ ತಳಿಗಳು, 8 ಅಡಿ ಉದ್ದದ ಸಹಸ್ರ ಬಾಳೆ ಪ್ರದರ್ಶನದ ಆಕ ರ್ಷಣೆಯಾಗಲಿದೆ. 100ಕ್ಕೂ ಹೆಚ್ಚಿನ ಬಾಳೆ ತಳಿಗಳನ್ನು ಸಂರಕ್ಷಿಸಿರುವ, ಶಿರಸಿಯ ಪ್ರಸಾದ್ ಹೆಗಡೆ, ಅಪರೂಪದ ಬಾಳೆ ಮತ್ತು ಕಂದುಗಳನ್ನು ಮೇಳದಲ್ಲಿ ಪ್ರದರ್ಶನಕ್ಕೆ ಅಣಿಗೊಳಿಸುತ್ತಿದ್ದಾರೆ.

<><><>

ಬಾಳೆಯ ಮೌಲ್ಯವರ್ಧಿತ ಉತ್ಪನ್ನಗಳು, ಬಾಳೆ ಹಣ್ಣು ಮತ್ತು ನೆಡಲು ಬಾಳೆಯ ಕಂದುಗಳು ಮಾರಾಟಕ್ಕೆ ಲಭ್ಯ ಇರಲಿವೆ.

<><><>

ಧಾರವಾಡ ಕೃಷಿ ವಿಶ್ವವಿದ್ಯಾಲಯದ ತೋಟಗಾರಿಕೆ ವಿಭಾಗದ ಮುಖ್ಯಸ್ಥ ರಾಮಕೃ ಷ್ಣ ಹೆಗಡೆ ಇಂದು ಬಾಳೆ ಮೇಳವನ್ನು ಉದ್ಘಾಟಿಸಲಿದ್ದಾರೆ. ಪ್ರಕಾಶ್ ಭಟ್ ಅಧ್ಯಕ್ಷತೆ ವಹಿಸಲಿದ್ದಾರೆ.

<><><>

ಪ್ರದೇಶ ಸಮಾಚಾರಕ್ಕಾಗಿ ಬಾಳೆ ಮೇಳದ ಕುರಿತು ಮಾಹಿತಿ ನೀಡಿದ್ದಾರೆ, ಸಹಜ ಸಮೃದ್ಧದ ಸಂಯೋಜಕ, ಶಾಂತಕುಮಾರ.

<><><>

ಶಾಂತಕುಮಾರ ಧ್ವನಿ 40 ಸೆಕೆಂದುಗಳು

<><><>

ಮಲೆನಾಡಿನ ಆರಾಧ್ಯ ದೈವ, ಚಂದ್ರಗುತ್ತಿ ಶ್ರೀ ರೇಣುಕಾದೇವಿ ಕ್ಷೇತ್ರದ ವಿಕಾಸಕ್ಕೆ, ಅಭಿವೃದ್ಧಿ ಪ್ರಾಧಿಕಾರ ರಚಿಸಲಾಗುವುದು ಎಂದು, ಶಿವಮೊಗ್ಗ ಜಿಲ್ಲೆ ಉಸ್ತುವಾರಿ ಸಚಿವ ಮಧು ಬಂಗಾರಪ್ಪ ತಿಳಿಸಿದ್ದಾರೆ. ಶಿವಮೊಗ್ಗ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ, ಪ್ರಗತಿ ಪರಿಶೀಲನಾ ಸಭೆಯ ಅಧ್ಯಕ್ಷತೆ ವಹಿಸಿ, ಸಚಿವರು ಮಾತನಾಡಿದರು. ಅಲ್ಲಮಪ್ರಭು ದೇವರ ಜನ್ಮಸ್ಥಳ ಬಳ್ಳಿಗಾವೆ ಹಾಗೂ ಶಿವಮೊಗ್ಗದಲ್ಲಿ ನೂತನವಾಗಿ ನಾಮಕರಣಗೊಂಡ, ಅಲ್ಲಮಪ್ರಭು ಫ್ರೀಡಂ ಪಾರ್ಕ್ ಮೈದಾನವನ್ನು, ಅತ್ಯಾಧುನಿಕ ರೀತಿಯಲ್ಲಿ ಅಭಿವೃದ್ಧಿಪಡಿಸಲಾಗುವುದು ಎಂದು, ಸಚಿವರು ಹೇಳಿದರು.

<><><>

ಹಿರಿಯ ಸಂಶೋಧಕ, ದಿವಂಗತ ಡಾಕ್ಟರ್ ಎಂ.ಎಂ.ಕಲಬುರ್ಗಿ ಅವರ 86ನೇ ಜಯಂತಿ ಇಂದು. ಧಾರವಾಡದ ಡಾಕ್ಟರ್ ಎಂ.ಎಂ.ಕಲಬುರ್ಗಿ ರಾಷ್ಟ್ರೀಯ ಪ್ರತಿಷ್ಠಾನ, ರಾಷ್ಟ್ರೀಯ ಪ್ರಶಸ್ತಿ ಪ್ರದಾನ ಮತ್ತು ಗ್ರಂಥ ಬಿಡುಗಡೆ ಕಾರ್ಯಕ್ರಮವನ್ನು, ಇಂದು ಬೆಳಗ್ಗೆ 11 ಗಂಟೆಗೆ, ಧಾರವಾಡದ ಕರ್ನಾಟಕ ಕುಲಪುರೋಹಿತ ಆಲೂರ ವೆಂಕಟರಾವ್ ಸಾಂಸ್ಕೃತಿಕ ಭವನದಲ್ಲಿ ಆಯೋಜಿಸಿದೆ. 'ಎಂ.ಎಂ. ಕಲಬುರ್ಗಿ ಸಂಶೋಧನ ಪ್ರಶಸ್ತಿ' ಮೈಸೂರಿನ ಹಿರಿಯ ಸಂಶೋಧಕ ಎನ್.ಎಸ್.ತಾರಾನಾಥ ಅವರಿಗೆ ಹಾಗೂ 'ಎಂ.ಎಂ.ಕಲಬುರ್ಗಿ ವಚನ ಸಂಗೀತ ಪ್ರಶಸ್ತಿ' ಧಾರವಾಡದ ಸಂಗೀತಗಾರ ಶರಣಬಸಪ್ಪ ಮೇಡೆದಾರ ಅವರಿಗೆ ಸಂದಿದೆ. ಪ್ರಶಸ್ತಿಗಳನ್ನು, ಅಖಿಲ ಭಾರತ 87ನೇ ಕನ್ನಡ ಸಾಹಿತ್ಯ ಸಮ್ಮೇಳನದ ನಿಯೋಜಿತ ಅಧ್ಯಕ್ಷ ನಾಡೋಜ ಗೊ.ರು.ಚನ್ನಬಸಪ್ಪ ಪ್ರದಾನ ಮಾಡಲಿದ್ದಾರೆ.

<><><>

ಬೆಳಗಾವಿ ಜಿಲ್ಲೆ, ಗೋಕಾಕ ತಾಲೂಕಿನ ಹೆಸರಾಂತ ಚಿತ್ರ ಕಲಾವಿದ ಸಿದ್ದಪ್ಪ ಪಾಟೀಲ, ಧಾರವಾಡದ ಚಿತ್ರಕಲಾ ಶಿಲ್ಪಿ, ಶ್ರೀ ಡಿ.ವ್ಹಿ. ಹಾಲಭಾವಿ ರಾಷ್ಟ್ರೀಯ ಸ್ಮಾರಕ ಟ್ರಸ್ಟ್ ವತಿಯಿಂದ, ಜೀವಮಾನ ಸಾಧನೆಗಾಗಿ ಪ್ರದಾನಿಸುವ, "ಕುಂಚ ಕಲಾ ತಪಸ್ವಿ ರಾಷ್ಟ್ರೀಯ ಪ್ರಶಸ್ತಿ"ಗೆ ಭಾಜನರಾಗಿದ್ದಾರೆ. ಗದುಗಿನ ಚಿತ್ರಕಲಾವಿದ ಕಮಲ್ ಅಹ್ಮದ್ ಎಮ್. "ಕುಂಚ ಕಲಾಶ್ರೀ ರಾಷ್ಟ್ರೀಯ ಪ್ರಶಸ್ತಿ"ಗೆ ಆಯ್ಕೆಯಾಗಿದ್ದಾರೆ. ನಾಸಿಕ್‌ನ ನಿಲೇಶ ಡಿ. ಭಾರ್ತಿ ಹಾಗೂ ಮುಂಬೈಯ ನಿಲಿಶಾ ಫಾಡ್ "ಯುವ ಕುಂಚ ಕಲಾಶ್ರೀ ರಾಷ್ಟ್ರೀಯ ಪ್ರಶಸ್ತಿಗೆ"ಗೆ ಭಾಜನರಾಗಿದ್ದಾರೆ.

<><><>

ಈ ನಾಲ್ವರು ಸಾಧಕ ಕಲಾವಿದರು, ಕೆಲಗೇರಿಯ ಜೆ.ಎಸ್.ಎಸ್. ಹಾಲಭಾವಿ ಸ್ಕೂಲ್ ಆಫ್ ಆರ್ಟ್‌ನಲ್ಲಿ, ಇಂದು ಬೆಳಗ್ಗೆ 11 ಗಂಟೆಗೆ, ಚಿತ್ರಕಲಾ ಪ್ರಾತ್ಯಕ್ಷಿಕೆ ನೀಡಲಿದ್ದಾರೆ.

<><><>

ನಾಳೆ ಸಂಜೆ ಸಂಜೆ 5.30ಕ್ಕೆ, ಧಾರವಾಡದ, ಆಲೂರು ವೆಂಕಟರಾವ್ ಸಾಂಸ್ಕೃತಿಕ ಭವನದಲ್ಲಿ, ಪ್ರಶಸ್ತಿ ಪ್ರದಾನ ಸಮಾರಂಭ ಜರುಗಲಿದೆ.

<><><>

ಶಿವಮೊಗ್ಗ ಜಿಲ್ಲೆ, ಶಿಕಾರಿಪುರ ತಾಲೂಕಿನ ಕಲ್ಮನೆ ಗ್ರಾಮದ, ಬನ್ನಿಕಾಳಮ್ಮನ ಗುಡಿ ಹತ್ತಿರ, ಕಲ್ಯಾಣ ಚಾಲುಕ್ಯರ ಆಳ್ವಿಕೆ ಕಾಲದ, ಎರಡು ಶಿಲಾ ಶಾಸನಗಳು ಪತ್ತೆಯಾಗಿವೆ. ಕಲ್ಯಾಣ ಚಾಲುಕ್ಯ ಅರಸ, 6ನೇ ವಿಕ್ರಮಾದಿತ್ಯನ ಆಳ್ವಿಕೆಯ ಕ್ರಿಸ್ತ ಶಕ 1084 ಹಾಗೂ ಕ್ರಿಸ್ತ ಶಕ 1096ರ ಕಾಲಕ್ಕೆ ಈ ಶಾಸನಗಳು ಸೇರಿವೆ. ವಿಜಯನಗರ ಜಿಲ್ಲೆ, ಹೊಸಪೇಟೆ ತಾಲೂಕು, ಕಮಲಾಪುರ-ಹಂಪಿ ಪುರಾತತ್ವ ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆ ನಿರ್ದೇಶಕ, ಆರ್.ಶೇಜೇಶ್ವರ ಮತ್ತು ಮಂಜಪ್ಪ ಚುರ್ಚಿಗುಂಡಿ ಅವರು, ಕ್ಷೇತ್ರ ಕಾರ್ಯ ಕೈಗೊಂಡು, ಶಾಸನಗಳನ್ನು ಪತ್ತೆ ಹಚ್ಚಿದ್ದಾರೆ.

<><><>

ಮಕ್ಕಳ ಹಕ್ಕುಗಳ ರಕ್ಷಣಾ ಕಾಯ್ದೆಯ ಸಮರ್ಪಕ ಅನುಷ್ಠಾನ, ಅಸಹಾಯಕ ಮಕ್ಕಳ ಬಾಲ್ಯವನ್ನು ರಕ್ಷಿಸಲಿದೆ ಎಂದು, ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗದ ಸದಸ್ಯ, ಶೇಖರಗೌಡ ರಾಮತ್ನಾಳ ಬಾಗಲಕೋಟೆಯಲ್ಲಿ ಹೇಳಿದ್ದಾರೆ.

<><><>

ಕೊನೆಯಲ್ಲಿ ಮತ್ತೊಮ್ಮೆ ಮುಖ್ಯಾಂಶಗಳು:

<><><>

- ಸರ್ವಧರ್ಮ ಸಮನ್ವಯ, ಭಾರತದ ಮಣ್ಣಿನ ಗುಣ – ಮುಖ್ಯಮಂತ್ರಿ ಸಿದ್ದರಾಮಯ್ಯ.
- ಶರಣ ಸಿದ್ಧಾಂತ ಎಲ್ಲರೂ ಮೆಚ್ಚಿರುವ, ನೆಚ್ಚಿರುವ ಸಿದ್ಧಾಂತ – ನಾಡೋಜ ಗೊ.ರು. ಚನ್ನಬಸಪ್ಪ.
- ಕಳಸಾ-ಬಂಡೂರಾ ಅನುಷ್ಠಾನಕ್ಕೆ, ಕೇಂದ್ರ ಸಚಿವರ ಮಧ್ಯಸ್ಥಿಕೆ ಅನಿವಾರ್ಯ – ಡಿ.ಕೆ.ಶಿವಕುಮಾರ.
- ದೇಸಿ ಬಾಳೆಯ ವೈವಿಧ್ಯ, ಕೃಷಿ ಮತ್ತು ಆಹಾರ ಸಂಸ್ಕೃತಿ ಪರಿಚಯಿಸಲು, ಧಾರವಾಡದಲ್ಲಿ, ಇಂದಿನಿಂದ ಮೂರು ದಿನಗಳ, 'ಬಾಳೆ ಮೇಳ'.

<><><>

ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.

<><><>

ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ, ಈ ಬೆಳಗ್ಗೆ 7 ಗಂಟೆ 35 ನಿಮಿಷಕ್ಕೆ.

<><><>

ಹರ್ಷ